ಆ)

ಯಶಸ್ವಿಯಾದ ಕೊಳವೆ ಬಾವಿಗಳು	ವಿದ್ಯುತ್ ಸಂಪರ್ಕ ಪಡೆಯಲಾದ ಕೊಳವೆ ಬಾವಿಗಳು	ಕಾರ್ಯನಿರತವಾದ ಕೊಳವೆ ಬಾವಿಗಳು
1	2	3
2868	1067	1067

ವಿದ್ಯಾರ್ಥಿ ವೇತನ ಕುರಿತು

254 ಡಾ: ಮಹದೇವಪ್ಪ ಹೆಚ್.ಸಿ. (ಟಿ. ನರಸೀಪುರ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಯಾವ ತರಗತಿಯಿಂದ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು; ಯಾವ ಯಾವ ತರಗತಿಗಳ ವಿದ್ಯಾರ್ಥಿಗಳಿಗೆ ಎಷ್ಟೆಷ್ಟು ವಿದ್ಯಾರ್ಥಿವೇತನವನ್ನು ನೀಡಲಾಗುವುದು;

ಆ) ಈ ವಿದ್ಯಾರ್ಥಿವೇತನಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವರ್ಷಕ್ಕೆ ನಿಗದಿಪಡಿಸುವ ಅನುದಾನವೆಷ್ಟು ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ವ್ಯಾಸಂಗ ಮಾಡುವ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ನೀಡುವ ಸೌಕರ್ಯಗಳೇನು;

ಇ) ಇದರಿಂದ ಪ್ರತಿ ವರ್ಷ ಎಷ್ಟು ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ;

ಈ) ವಿದೇಶಗಳಲ್ಲಿ ಉನ್ನತ ವ್ಯಾಸಂಗಕ್ಕೆ ಅರ್ಹರಿರುವ ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಸರ್ಕಾರದಿಂದ ಕೈಗೊಳ್ಳುವ ಕ್ರಮಗಳೇನು; ಕಳೆದ ಮೂರು ವರ್ಷಗಳ ಮಾಹಿತಿಯನ್ನು ಒದಗಿಸುವುದು?

ಶ್ರೀ ಡಿ. ಸುಧಾಕರ (ಸಮಾಜ ಕಲ್ಯಾಣ ಸಚಿವರು)

ಅ) ಸಮಾಜ ಕಲ್ಯಾಣ ಇಲಾಖೆಯಿಂದ ರಾಜ್ಯದಲ್ಲಿ 1ನೇ ತರಗತಿಯಿಂದ ಸ್ನಾತಕೋತ್ತರ ಕೋರ್ಸ್‌ಗಳವರೆಗೆ ವ್ಯಾಸಂಗ ಮಾಡುವ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ವಿವಿಧ ವಿದ್ಯಾರ್ಥಿ ವೇತನಗಳನ್ನು ನೀಡಲಾಗುವುದು. ತರಗತಿವಾರು ಮಂಜೂರು ಮಾಡುವ ವಿದ್ಯಾರ್ಥಿ ವೇತನದ ವಿವರ ಕೆಳಕಂಡಂತಿದೆ.

ಕ್ರ.ಸಂ.	ವಿವರ	ತರಗತಿ	ವಿದ್ಯಾರ್ಥಿ ವೇತನ (ರೂ.ಗಳಲ್ಲಿ)
1	2	3	4
1	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ	I-VII VII-X	75.00 100.00
2	ಪ್ರತಿಭಾ ವಿದ್ಯಾರ್ಥಿ ವೇತನ	I-VII VIII-X	75.00 100.00
3	ಹೆಣ್ಣು ಮಕ್ಕಳ ಪ್ರೋತ್ಸಾಹಧನ	I-VII VII-X	250.00 500.00
4	ಬಹುಮಾನ ಧನ	ಎಸ್.ಎಸ್.ಎಲ್.ಸಿ. ಪಿ.ಯು.ಸಿ. ಪದವಿ	500.00 750.00 1000.00
	ಸ್ನಾತಕೋತ್ತರ ಪದವಿ		
5	ಪ್ರೋತ್ಸಾಹ ಧನ	ಎಸ್.ಎಸ್.ಎಲ್.ಸಿ. ಪ್ರತಿ ಜಿಲ್ಲೆಯ ಅತಿ ಹೆಚ್ಚು ಅಂಕ ಗಳಿಸಿದ 5 ವಿದ್ಯಾರ್ಥಿಗಳಿಗೆ ಪಿ.ಯು.ಸಿ. ಪ್ರತಿ ಜಿಲ್ಲೆಯ ಅತಿ ಹೆಚ್ಚು ಅಂಕ ಗಳಿಸಿದ 5 ವಿದ್ಯಾರ್ಥಿಗಳಿಗೆ	5000.00 10,000.00
6	ಬಹುಮಾನ ಧನ	ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 60ಕ್ಕಿಂತ ಹೆಚ್ಚು ಅಂಕ	5000.00

1	2	3	4
		ಗಳಿಸಿದವರಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.75ಕ್ಕಿಂತ ಹೆಚ್ಚು ಅಂಕ ಗಳಿಸಿದವರಿಗೆ	10,000.00
7	ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವ ಪೋಷಕರ ಮಕ್ಕಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ	ಡೇ ಸ್ಕಾಲರ್ಸ್ I-X	110.00 ಮಾಹೆಯಾನ
		ಅಡ್ಹಾಕ್ ಗ್ರಾಂಟ್	**750.00**
		ಹಾಸ್ಟೆಲರ್ಸ್ III-X	**700.00**
		ಅಡ್ಹಾಕ್ ಗ್ರಾಂಟ್	**1000.00**

ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ

ಗ್ರೂಪ್	ಡೇ ಸ್ಕಾಲರ್ಸ್ (ಮಾಹೆಯಾನ ರೂ.ಗಳಲ್ಲಿ)	ಹಾಸ್ಟೆಲರ್ಸ್ (ಮಾಹೆಯಾನ ರೂ.ಗಳಲ್ಲಿ)
1	2	3
I	330	740
II	330	510
III	185	355
IV	140	235

ಆ, ಇ) ಈ ವಿದ್ಯಾರ್ಥಿ ವೇತನಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನಿಗದಿಪಡಿಸಿರುವ ಅನುದಾನದ ವಿವರ ಈ ಕೆಳಕಂಡಂತಿದೆ.

ವಿದ್ಯಾರ್ಥಿ ವೇತನದ ವಿವರ	2009–10ನೇ ಸಾಲಿಗೆ ಒದಗಿಸಿರುವ ಅನುದಾನ (ರೂ.ಲಕ್ಷಗಳಲ್ಲಿ)			2008–09ನೇ ಸಾಲಿಗೆ ಪ್ರಯೋಜನ ಪಡೆದ ವಿದ್ಯಾರ್ಥಿಗಳ ವಿವರ
	ಕೇಂದ್ರ	ರಾಜ್ಯ	ಒಟ್ಟು	
1	2	3	4	5
ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ				
ಪರಿಶಿಷ್ಟ ಜಾತಿ	–	1615.30	1615.30	13,26,345
ಪರಿಶಿಷ್ಟ ವರ್ಗ	–	736.51	736.51	678148
ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ				
ಪರಿಶಿಷ್ಟ ಜಾತಿ	9061.75	13742.19	20803.94	2,26,970
ಪರಿಶಿಷ್ಟ ವರ್ಗ	2181.13	1849.00	4030.13	68,560

ಸರ್ಕಾರಿ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಸೌಕರ್ಯಗಳ ವಿವರ ಕೆಳಕಂಡಂತಿದೆ.

ಸರ್ಕಾರಿ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಸೌಕರ್ಯಗಳ ವಿವರ ಈ ಕೆಳಕಂಡಂತಿದೆ.

ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿರುವ ನಿಲಯಾರ್ಥಿಗಳಿಗೆ:

1) ಆಹಾರ ಬೆಚ್ಚ ಮಾಸಿಕ ರೂ. 600/–
2) ಸಮವಸ್ತ್ರ ವಾರ್ಷಿಕ ರೂ. 500/–
3) ಇತರೆ ಬೆಚ್ಚ ಮಾಸಿಕ ರೂ.40/–
4) ಪಠ್ಯ ಪುಸ್ತಕ ಮತ್ತು ಲೇಖನ ಸಾಮಗ್ರಿ ವಾರ್ಷಿಕ ರೂ. 250/–

5) ಕ್ಷೌರ (ಬಾಲಕರಿಗಾಗಿ) ವಾರ್ಷಿಕ ರೂ. 60/--

6) ಹಾಸಿಗೆ ಹೊದಿಕೆಗಳು ವಾರ್ಷಿಕ ರೂ. 400/– (3 ವರ್ಷಕ್ಕೊಮ್ಮೆ)

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿರುವ ನಿಲಯಾರ್ಥಿಗಳಿಗೆ:

1) ಆಹಾರ ವೆಚ್ಚ ಮಾಸಿಕ ರೂ. 650/--

ವಿದ್ಯಾರ್ಥಿನಿಲಯಗಳಲ್ಲಿ ಪ್ರಸ್ತುತ ಪ್ರಯೋಜನ ಪಡೆಯುತ್ತಿರುವ ವಿದ್ಯಾರ್ಥಿಗಳ ವಿವರ ಕೆಳಕಂಡಂತಿದೆ.

		ಪರಿಶಿಷ್ಟ ಜಾತಿ/	ಪರಿಶಿಷ್ಟ ವರ್ಗ
1)	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ	89883	7645
2)	ಮೆಟ್ರಿಕ್ ನಂತರ್ ವಿದ್ಯಾರ್ಥಿನಿಲಯ	41,155	2344
	ಒಟ್ಟು	**1,31,038**	**9989**

ಈ) ವಿದೇಶಗಳಲ್ಲಿ ಉನ್ನತ ವ್ಯಾಸಂಗಕ್ಕೆ ಸರ್ಕಾರವು ನಿಗದಿಪಡಿಸಿರುವ ಕೋರ್ಸು ಹಾಗೂ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ. 1.44 ಲಕ್ಷದೊಳಗಿರುವ ಅರ್ಜಿ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳನ್ನು ಸರ್ಕಾರದ ಆಯ್ಕೆ ಸಮಿತಿಯಿಂದ ಆಯ್ಕೆಮಾಡಲಾಗುತ್ತಿದೆ. ಕಳೆದ 3 ವರ್ಷಗಳಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಮಾಹಿತಿ ಈ ಕೆಳಕಂಡಂತಿದೆ:

ಕ್ರ. ಸಂ.	ವರ್ಷ	ಅಭ್ಯರ್ಥಿಗಳ ಸಂಖ್ಯೆ	ಮಂಜೂರಾದ ಅನುದಾನ
1	**2**	**3**	**4**
1	2006–07	3	17.90
2	2007–08	4	25.41571
3	2008–09	–	–
	ಒಟ್ಟು	**7**	**43.31571**

ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಪರಿಶಿಷ್ಟ ವರ್ಗದ ಆಯ್ಕೆಯಾದ ಅಭ್ಯರ್ಥಿಗಳಿಗೆ ವಾರ್ಷಿಕ ರೂ. 3.50 ಲಕ್ಷ ಅಥವಾ ವ್ಯಾಸಂಗದ ಪೂರ್ಣ ಅವಧಿಗೆ ಗರಿಷ್ಟ ರೂ. 10.00 ಲಕ್ಷಗಳ ಧನ ಸಹಾಯವನ್ನು ನೀಡಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಪರಿಶಿಷ್ಟ

ವರ್ಗದ 4 ಅಭ್ಯರ್ಥಿಗಳು ಆಯ್ಕೆಯಾಗಿ ಈ ಯೋಜನೆಯಡಿ ಧನ ಸಹಾಯ ಸೌಲಭ್ಯ ಪಡೆದು ವ್ಯಾಸಂಗ ಮಾಡುತ್ತಿದ್ದಾರೆ.

563 ಡಾ: ಮಹದೇವಪ್ಪ ಹೆಚ್.ಸಿ. (ಟಿ. ನರಸೀಪುರ (ಎಂ.ಎಲ್.ಎ.) ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಯನ್ನು ದಯವಿಟ್ಟು ಉತ್ತರಿಸುವರೆ?

ರಾಜ್ಯದಲ್ಲಿರುವ ಮುಸ್ಲಿಂ ಜನಸಂಖ್ಯೆ ಎಷ್ಟು; ಅವರುಗಳಲ್ಲಿರುವ ವಿದ್ಯಾವಂತರ ಸಂಖ್ಯೆ ಎಷ್ಟು ; ಅವರುಗಳಲ್ಲಿ ಎಷ್ಟು ಮಂದಿ ಪದವೀಧರರದ್ದಾರೆ; ಯಾವ ಯಾವ ವಿಷಯದಲ್ಲಿ ಪದವಿ ಪಡೆದಿದ್ದಾರೆ; ಅವರುಗಳಲ್ಲಿ ಮಹಿಳೆಯರ ಸಂಖ್ಯೆ ಎಷ್ಟು; ಇವರುಗಳ ವಿದ್ಯಾಭ್ಯಾಸಕ್ಕೆ ಸರ್ಕಾರವು ಕಳೆದ ಮೂರು ವರ್ಷಗಳಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಕೈಗೊಂಡಿರುವ ಅಭಿವೃದ್ಧಿ ಕ್ರಮಗಳೇನು ಎಂಬುದರ ಜಿಲ್ಲಾವಾರು ಮತ್ತು ತಾಲ್ಲೂಕುವಾರು ಸಮಗ್ರ ಮಾಹಿತಿ ಒದಗಿಸುವುದು?

ಶ್ರೀ ಪ್ರೊ.ಡಾ. ಮುಮ್ತಾಜ್ ಆಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

2001ರ ಜನಗಣತಿಯ ಪ್ರಕಾರ ರಾಜ್ಯದಲ್ಲಿನ ಮುಸ್ಲಿಂ ಜನಸಂಖ್ಯೆ: ---------- 64, 63, 127

ರಾಜ್ಯದ ಮುಸ್ಲಿಂ ವಿದ್ಯಾವಂತರ ಸಂಖ್ಯೆ ಲಭ್ಯವಿರುವುದಿಲ್ಲ ಆದರೆ, ಮುಸ್ಲಿಂ ಅಕ್ಷರಸ್ಥರ ಸಂಖ್ಯೆ ---------- 37, 99, 433 (59%)

ಒಟ್ಟು ಪದವಿಧರರ ಸಂಖ್ಯೆ ---------- 1, 44, 575 (2.23%)

ಮಹಿಳಾ ಪದವೀದರರ ಸಂಖ್ಯೆ ---------- 45, 180 (0.69%)

ಮುಸ್ಲಿಂ ಪದವೀದರರು ಪಡೆದಿರುವ ಪದವಿ ವಿಷಯದ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಅರಿವು ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಒಟ್ಟಾರೆ ರೂ. 2772.86 ಲಕ್ಷಗಳನ್ನು ವೃತ್ತಿಪರ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಸಾಲವಾಗಿ ಮಂಜೂರು ಮಾಡಲಾಗಿದೆ.

ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಅಲ್ಪಸಂಖ್ಯಾತರ ಜನರಿಗಾಗಿ ಅನುಬಂಧ-1ರಲ್ಲಿ ನೀಡಲಾಗಿರುವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.